ನಾಮಿನೇಟ್ ಮಾಡಿದ್ದಕ್ಕೆ ಬಹಳ ಬಹಳ ಆಭಾರಿ ಎಂದರು. ನಂತರ ತನ್ನನ್ನೊಬ್ಬ ಪೋಸ್ಟ್‌ಕೊಲೋನಿಯಲ್, ಪೋಸ್ಟ್‌ಮಾಡರ್ನ್, ಪೋಸ್ಟ್‌ಡಿಜಿಟಲ್, ಪೋಸ್ಟ್‌ರ್‍ಯಾಶನಲ್, ಪೋಸ್ಟ್ ಫಿಲಸಾಫಿಕಲ್ ಲೆಫ್ಟಿಸ್ಟ್ ಥಿಂಕರ್‌ಡೂವರ್ ಎಂದರು. (ಅವೆಷ್ಟು ಪೋಸ್ಟುಗಳಿದ್ದವೋ ನನಗೀಗ ಮರೆತುಹೋಗಿದೆ, ಯಾಕೆಂದರೆ ಅವರ ಮಾತಿನ ಓಘ ನನ್ನ ಮೇಲಿನ ಒಂದು ರಾಜಕೀಯ ದಾಳಿಯ ಹಾಗೆ ಇತ್ತು). ಒಂದೆಡೆ ಬ್ರಿಟಿಷರನ್ನ ಬಯ್ದರು; ಇನ್ನೊಂದೆಡೆ ಅಮೆರಿಕವನ್ನ; ಆಮೇಲೆ ಭಾರತವನ್ನ; ಕೊನೆಗೆ ಎಲ್ಲರನ್ನ.

'ನೀನೊಬ್ಬ ಏಕತಾವಾದಿ ಎಂದು ಗೊತ್ತಾಯಿತು,' ಎಂದರು.

'ಇಲ್ಲ, ಇಲ್ಲ, ನಾನು ಏಕತಾವಾದಿಯಲ್ಲ, ಅನೇಕತಾವಾದಿ. ಆದ್ದರಿಂದಲೇ ಏಕನಾಥ ಎಂಬ ಹೆಸರನ್ನು ಅನೇಕ ಎಂದು ಮಾಡಿಕೊಂಡೆ,' ಎಂದೆ.

'ಏನು ವ್ಯತ್ಯಾಸ? ಡಿಕನ್‌ಸ್ಟ್ರಕ್ಷನ್ ಚೇಸ್ತೆ ರಂಡೂ ಒಕ್ಕಟೇನೇ!'

ಈಗ ಅದು ಬೇಡ, ಸಮಯವಿಲ್ಲ ಎಂಬ ಸೂಚನೆಯನ್ನು ಅಧ್ಯಕ್ಷೆ ನೀಡಿದ್ದರಿಂದ ನಾಯ್ಡು ಅವರು, 'ಇರಲಿ, ಅದೀಗ ಬೇಡ. ನನಗೆ ಒಂದು ಮಾತಿನಲ್ಲಿ ಹೇಳು: ನೀನು ಮಾರ್ಜಿನ್‌ನಿಂದ ಮೇನ್‌ಸ್ಟ್ರೀಮಿಗೆ ಯಾಕೆ ಬರಬೇಕು?' ಎಂದು ಪ್ರಶ್ನೆ ಹಾಕಿದರು.

'ನಿಜ ಹೇಳಲೇ ಸರ್? ಇಲ್ಲಿಗೆ ತಲಪುವ ಮೊದಲು ನನಗೆ ಉತ್ತರ ಗೊತ್ತಿತ್ತು, ಆದರೆ, ಈಗ ಗೊತ್ತಿಲ್ಲ.'

'ಥಿಂಕ್ ಅಬೌಟಿಟ್, ಯಂಗ್ ಮ್ಯಾನ್. ಥಿಂಕ್ ಅಬೌಟಿಟ್. ತರುವಾತ ನಾಕು ಚೆಪ್ಪು.'

ನಾಯ್ಡು ನನ್ನನ್ನು ಯಂಗ್ ಮ್ಯಾನ್ ಎಂದು ಕರೆದುದರಿಂದ ನಾನು ಪುಳಕಿತನಾಗಿಬಿಟ್ಟೆ. ವಾಸ್ತವ ಎಂದರೆ ನಾನು ಯಂಗೇನೂ ಆಗಿರಲಿಲ್ಲ. 'ಆಯ್ತು ಸರ್. ಐ ವಿಲ್.'

ಡಾಕ್ಟರ್ ನಾಯ್ಡುರ ಸರದಿ ಮುಗಿದ ಮೇಲೆ ಅಧ್ಯಕ್ಷೆ ರುದ್ರಮದೇವಿ (ಅವರ ಹೆಸರು ಹಾಗೆಂದು ನನಗೆ ಅವರ ನಡುವಣ ಮಾತಿನಲ್ಲಿ ಗೊತ್ತಾಗಿತ್ತು) ಪ್ರಶ್ನೋತ್ತರವನ್ನು ತಾವೇ ಕೈಗೆತ್ತಿಕೊಂಡರು.

'ನೌ, ಏಕ್‌ನಾಥ್...'

'ಅನೇಕ...'

'ಅನೇಕ, ನೀನು ಯಾಕೆ ಮೇನ್‌ಸ್ಟ್ರೀಮಿಗೆ ಬಂದಿಲ್ಲ ಎಂಬುದನ್ನು ಎಂದಾದರೂ ವಿವೇಚನೆ ಮಾಡಿ ನೋಡಿದ್ದೀಯಾ?'

'ನನ್ನನ್ನು ಬರುವುದಕ್ಕೆ ಬಿಟ್ಟಿಲ್ಲ!'

'ಆ ಯೋಚನೆ ಮೊದಲ ತಪ್ಪು; ಯಾಕೆಂದರೆ ಯಾರು ಯಾರನ್ನೂ ಬಿಡುವುದಿಲ್ಲ ತಡೆಯುವುದೂ ಇಲ್ಲ.'

'ಆದರೆ, ಗ್ರೌಂಡ್ ರಿಯಾಲಿಟಿ ಹಾಗಿಲ್ಲ, ಮೇಡಮ್.'

'ನೀನು ನನಗೆ ಗ್ರೌಂಡ್ ರಿಯಾಲಿಟಿ ಬಗ್ಗೆ ಕಲಿಸುತ್ತೀಯಾ?' ಫೈಲನ್ನು ಎತ್ತಿ ಹಿಡಿದು ಮೇಜಿಗೆ ಕುಟ್ಟಿ, 'ಇದರಲ್ಲಿ ನಿನ್ನ ಇಡೀ ಚರಿತ್ರೆ ಇದೆ. ನಿನ್ನನ್ನು ಹರ್ಟ್ ಮಾಡುವುದು ನನ್ನ ಉದ್ದೇಶ ಅಲ್ಲ. ನಿನ್ನನ್ನು ನೀನೇ ಹರ್ಟ್ ಮಾಡಿಕೊಂಡು ಇತರರನ್ನು ಹಳಿದರೆ ಯಾರೇನು ಮಾಡುವುದಕ್ಕಾಗುತ್ತದೆ? ಅದಕ್ಕೇ ಹಣೆಬರಹ ಎನ್ನುವುದು,' ಎಂದರು ತುಸು ಕೋಪದಿಂದ.

'ಅರ್ಥವಾಗಲಿಲ್ಲ, ಮೇಡಂ. ಈವತ್ತು ನನ್ನ ಅತ್ಯುತ್ತಮ ದಿನ ಅಂದುಕೊಂಡಿದ್ದೆ, ಆದರೆ, ಹಾಗಿಲ್ಲ.'

'ಮೊದಲನೇದಾಗಿ, ಈ ಕಾಲಕ್ಕೆ ವಿರುದ್ಧವಾಗಿ ನೀನು ನಿಂತಿದ್ದಿ. ಈಗ ನಿನ್ನ ಸಮಕಾಲೀನರನ್ನು ಮತ್ತು ಯುವಕಾಲೀನರನ್ನು ಗಮನಿಸಿನೋಡು. ಸಮಕಾಲೀನರಲ್ಲಿ ಹಲವರು ಭಕ್ತಿಪಂಥವನ್ನು